SC 5/2023
PW.11

**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 5/2023** **ಅಸಾ.11**
**ಚಾಸಾ.19**

| | | |
|---|---|---|
| ಸಾಕ್ಷಿದಾರರ ಹೆಸರು | - | ಶೇಖರ ಪೂಜಾರಿ |
| ತಂದೆಯ ಹೆಸರು | - | ಕಾಡ್ಯ ಪೂಜಾರಿ |
| ವಯಸ್ಸು | - | 53 ವರ್ಷ |
| ಉದ್ಯೋಗ | - | ಖಾಸಗಿ |
| ವಿಳಾಸ | - | ಸಚ್ಚೇರಿಪೇಟೆ. |

ದಿನಾಂಕಃ 12.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ :**

ಮೃತ ಕೃತಿಕ್ ಈತ ಗೊತ್ತು. ಆರೋಪಿಯ ಪರಿಚಯ ಇದೆ. ಬ್ರಹ್ಮಾವರದಲ್ಲಿ ಪಿಂಗಾರ ಹೋಟೆಲ್ ಆರೋಪಿಗೆ ಸೇರಿದ್ದು, ಅದರಲ್ಲಿ ನಾನು ಅಡುಗೆ ಕೆಲಸ ಮಾಡಿಕೊಂಡಿದ್ದೆ. ಆರೋಪಿಯ ಮನೆಯವರು ಸದ್ರಿ ಹೋಟೆಲ್ ನಲ್ಲಿ ವ್ಯವಹಾರ ಮಾಡಲು ಸಹಕರಿಸುತ್ತಿದ್ದರು. ಮೃತ ಕೃತಿಕ್ ಆರೋಪಿ ನಡೆಸುತ್ತಿದ್ದ ಹೋಟೆಲ್ ಗೆ ಬರುತ್ತಿದ್ದ ಮತ್ತು ಹಾಸ್ಯವಾಗಿ ಮಾತನಾಡುತ್ತಿದ್ದ ಅಲ್ಲದೆ ಹೋಟೆಲ್ ಕೆಲಸದಲ್ಲಿ ಸಹಕರಿಸುತ್ತಿದ್ದ.

2. ಕೃತಿಕ್ ನಾಲ್ಕು ವರ್ಷದ ಹಿಂದೆ ಮೃತಪಟ್ಟಿರುತ್ತಾನೆ. ಕೃತಿಕ್ ಮೃತಪಟ್ಟ ದಿನ ಸುಮಾರು 10 ಗಂಟೆ ಹೊತ್ತಿಗೆ ಆರೋಪಿ ಹೋಟೆಲ್ ಗೆ ಬಂದರು. ಆ ದಿವಸ ಹೆದರಿದ ಹಾಗೆ ಮತ್ತು ಗಾಬರಿಯಲ್ಲಿದ್ದ ಹಾಗೆ ಕಂಡು ಬಂದ. ನಂತರ ಆರೋಪಿ ಆತನ ಅತ್ತೆಯ ಬಳಿ ಕೃತಿಕ್ ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ತಿಳಿಸಿರುತ್ತಾನೆ. ನಂತರ ನಾನು ಹೋಟೆಲ್ ಕೆಲಸ ಬಿಟ್ಟು

ಹೋಗಿರುತ್ತೇನೆ. ಒಮ್ಮೆ ದಿನಪತ್ರಿಕೆಯಲ್ಲಿ ಓದುವಾಗ ಆರೋಪಿ ಕೃತಿಕನನ್ನು ಕೊಲೆ ಮಾಡಿರುವ ವಿಚಾರ ಗೊತ್ತಾಗಿರುತ್ತದೆ. ಪೋಲಿಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದುಕೊಂಡಿರುತ್ತಾರೆ.

**ಪಾಟಿ ಸವಾಲುಃ ಆರೋಪಿಯ ಪರ ಶ್ರೀ ಎಸ್.ಎ. ವಕೀಲರಿಂದಃ**

ಕೃತಿಕ್ ನ ಜೊತೆ ನನ್ನ ಒಡನಾಟ ಇರಲಿಲ್ಲ. ಆರೋಪಿ ಆ ದಿನ ಹೆದರಿದ ಹಾಗೆ ಮತ್ತು ಗಾಬರಿಯಲ್ಲಿದ್ದ ಹಾಗೆ ಕಂಡುಬಂದ ಎಂದು ಪೋಲಿಸರಿಗೆ ಹೇಳಿಲ್ಲ. ಆರೋಪಿ ಹೋಟೆಲ್ ನಲ್ಲಿ ವ್ಯಾಪಾರ ಚೆನ್ನಾಗಿ ಆದಾಗ ಖುಷಿಯಾಗಿ ಇರುತ್ತಿದ್ದರು. ವ್ಯಾಪಾರ ಇಲ್ಲದೇ ಇದ್ದಾಗ ಬೇಜಾರಿನಲ್ಲಿ ಇರುತ್ತಿದ್ದರು. ಆ ದಿನ ಆರೋಪಿ ನನ್ನ ಬಳಿ ಯಾವುದೇ ವಿಷಯ ಹೇಳಿಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ. ಪೋಲಿಸರ ಹೇಳಿಕೆಯ ಪ್ರಕಾರ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ -ಇಲ್ಲ-

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.